# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **2001+1974** |
| ಮಾನ್ಯ ಸದಸ್ಯರ ಹೆಸರು | : | **ಡಾ॥ ತಳವಾರ್ ಸಾಬಣ್ಣ** (ನಾಮನಿರ್ದೇಶನ ಹೊಂದಿದವರು) ಹಾಗೂ **ಶ್ರೀ ರಾಮೋಜಿಗೌಡ** (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | **24.03.2026** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ಮೂರು ವರ್ಷಗಳಿಂದ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಪ್ರಮಾಣ (ಎಂ.ಎಸ್.ಎಂ.ಇ) ಉದ್ಯಮಗಳಿಗೆ ಸಬ್ಸಿಡಿ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕಳೆದ ಮೂರು ವರ್ಷಗಳಲ್ಲಿ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂ.ಎಸ್.ಎಂ.ಇ) ಉದ್ಯಮಗಳಿಗೆ ಸಹಾಯಧನವು ಬಿಡುಗಡೆಯಾಗಿದ್ದು, ಅದರ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| (ಆ) | ರಾಜ್ಯದಲ್ಲಿ 8 ಲಕ್ಷಕ್ಕೂ ಅಧಿಕ ಎಂ ಎಸ್ ಎಂ ಇ ಗಳು ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿದ್ದು, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಎಂ.ಎಸ್.ಎಂ.ಇ ಕೈಗಾರಿಕೆಗಳು ಆರ್ಥಿಕ ಮುಗ್ಗಟ್ಟಿಗೆ ಒಳಗಾದಲ್ಲಿ ಸಾಲ ನೀಡಿರುವ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಯಂತೆ ಅವಶ್ಯ ಕ್ರಮ ಕೈಗೊಳ್ಳಬೇಕಿರುತ್ತದೆ.<br><br>ರಾಜ್ಯ ಸರ್ಕಾರವು ಹೊಸದಾಗಿ ಸ್ಥಾಪಿಸುವ ಕೈಗಾರಿಕಾ ಘಟಕಗಳಿಗೆ 2025-30 ರ ಕೈಗಾರಿಕಾ ನೀತಿಯನ್ನು ಜಾರಿಗೆ ತಂದಿದ್ದು, ಸದರಿ ನೀತಿಯಡಿಯಲ್ಲಿ ಲಭ್ಯವಿರುವ ಈ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ.<br><br>1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ.<br>2. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕ ರಿಯಾಯಿತಿ<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ.<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ.<br>5. ವಿದ್ಯುತ್ ಶಕ್ತಿ ಸಹಾಯಧನ.<br>6. ತಂತ್ರಜ್ಞಾನ ಅಳವಡಿಕೆ & ನವೋನ್ವೇಶಣೆ ಉತ್ತೇಜನ<br>7. ರಫ್ತು ಘಟಕಗಳಿಗೆ ಪ್ರೋತ್ಸಾಹ. |

| | | |
|---|---|---|
| | | 8. ಸುಸ್ಥಿರತೆ ಮತ್ತು ಜವಾಬ್ದಾರಿಯುತ ಕೈಗಾರೀಕರಣ ಉತ್ತೇಜನ<br>9. ಲಾಜಿಸ್ಟಿಕ್ಸ್ ಮತ್ತು ಉಗ್ರಾಣ ಸಹಾಯಧನ |
| (ಇ) | ಲಕ್ಷಾಂತರ ಜನರಿಗೆ ಉದ್ಯೋಗ ನೀಡುವ ಎಂ ಎಸ್ ಎಂ ಇ ಗಳು ಸರ್ಕಾರದ ಸಬ್ಸಿಡಿ ನೆಚ್ಚಿಕೊಂಡಿರುವುದರಿಂದ ಸಬ್ಸಿಡಿ ಬಿಡುಗಡೆ ಮಾಡಲು ತಕ್ಷಣವೇ ಕ್ರಮ ಕೈಗೊಳ್ಳಬಹುದೇ; | ಎಂ ಎಸ್ ಎಂ ಇ ಗಳಿಗೆ ಸರ್ಕಾರದಿಂದ ವಾರ್ಷಿಕವಾಗಿ ಹಂಚಿಕೆಯಾಗಿ ಕಾಲಕಾಲಕ್ಕೆ ಬಿಡುಗಡೆಯಾಗುವ ಸಹಾಯಧನವನ್ನು ವಾರ್ಷಿಕ ವಹಿವಾಟು ಮತ್ತು ಜೇಷ್ಠತೆಯ ಆಧಾರದ ಮೇಲೆ ಕೈಗಾರಿಕಾ ಘಟಕಗಳಿಗೆ ಬಿಡುಗಡೆ ಮಾಡಿರುವ ಕಳೆದ 05 ವರ್ಷಗಳ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ. |
| (ಈ) | ನೈಜ ಸಮಯದ ಉದ್ಯೋಗ ಹೊಂದಾಣಿಕೆಗಾಗಿ ಏಕೀಕೃತ MSME ಉದ್ಯೋಗ ಪೋರ್ಟಲ್ ಅನ್ನು ರಚಿಸಲು ಸರ್ಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ; | ಏಕೀಕೃತ MSME ಉದ್ಯೋಗ ಪೋರ್ಟಲ್ ರಚಿಸುವ ಪ್ರಸ್ತಾವನೆ ಇರುವುದಿಲ್ಲ. |
| (ಉ) | MSME ಗಳಿಗೆ ಸಂಬಂಧಿಸಿದ ಡಿಜಿಟಲ್ ಉದ್ಯೋಗ ವೇದಿಕೆಗಳಿಂದ ಗ್ರಾಮೀಣ ಯುವಕರು ಸಮರ್ಪಕವಾಗಿ ಪ್ರಯೋಜನ ಪಡೆಯುತ್ತಿಲ್ಲ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲಾಖೆಯಲ್ಲಿ ಡಿಜಿಟಲ್ ಉದ್ಯೋಗ ವೇದಿಕೆ ಇರುವುದಿಲ್ಲ. |
| (ಊ) | ಉದ್ಯೋಗ ಸಂಬಂಧಿತ ಅಪ್ಲಿಕೇಶನ್‌ಗಳಲ್ಲಿ ಪಾರದರ್ಶಕತೆಯನ್ನು ಸರ್ಕಾರ ಹೇಗೆ ಖಚಿತಪಡಿಸಿಕೊಳ್ಳುತ್ತಿದೆ ಮತ್ತು ನಕಲಿ ಉದ್ಯೋಗ ಪಟ್ಟಿಗಳನ್ನು ಹೇಗೆ ತಡೆಯುತ್ತಿದೆ; | ಇಲಾಖೆಯಲ್ಲಿ ಉದ್ಯೋಗ ಸಂಬಂಧಿತ ಅಪ್ಲಿಕೇಶನ್ ಇರುವುದಿಲ್ಲ. |
| (ಋ) | ಸರ್ಕಾರಿ ಸ್ಮಾರ್ಟ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಸ್ಥಳೀಯ ನಿರುದ್ಯೋಗಿ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ MSME ಗಳಿಗೆ ಯಾವ ಪ್ರೋತ್ಸಾಹ ಧನಗಳನ್ನು ನೀಡಲಾಗುತ್ತದೆ? | ಸರ್ಕಾರಿ ಸ್ಮಾರ್ಟ್ ಪ್ಲಾಟ್‌ಫಾರ್ಮ್‌ಗಳ ಮೂಲಕ ಸ್ಥಳೀಯ ನಿರುದ್ಯೋಗಿ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವ MSME ಗಳಿಗೆ ಪ್ರೋತ್ಸಾಹ ಧನ ನೀಡುವ ಯಾವುದೇ ಕಾರ್ಯಕ್ರಮ ಇಲಾಖೆಯಲ್ಲಿ ಇರುವುದಿಲ್ಲ. |

**ಸಿಐ 60 ಎಸ್‌ಎಸ್‌ಐ 2026**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) ಹಾಗೂ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2001+1974

ಅನುಬಂಧ- 1

DETAILS OF INCENTIVE AND SUBSIDY RELEASED UNDER INDUSTRIAL POLICY FROM 2022-23 TO 2024-25

( Rs. In lakhs)

| YEAR | INVESTMENT SUBSIDY | | INTEREST SUBSIDY | | NA | | ETP SUBSIDY | | VAT | | POWER SUBSIDY | | TOTAL | |
|---|---|---|---|---|---|---|---|---|---|---|---|---|---|---|
| | NO | AMT | NO | AMT | NO | AMT | NO | AMT | NO | AMT | NO | AMT | NO | AMT |
| 2022-23 | 377 | 5944.20 | 231 | 305.16 | 22 | 34.02 | 30 | 933.95 | 1 | 13.03 | 6 | 33.87 | 667 | 7264.23 |
| 2023-24 | 617 | 9223.30 | 1 | 0.54 | | | 2 | 49.17 | | | | | 620 | 9273.01 |
| 2024-25 | 753 | 13352.04 | 104 | 122.11 | 29 | 25.67 | 38 | 1032.97 | | | 140 | 474.88 | 1064 | 15007.67 |
| TOTAL | 1747 | 28519.54 | 336 | 427.81 | 51 | 59.69 | 70 | 2016.09 | 1 | 13.03 | 146 | 508.75 | 2351 | 31544.91 |

ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) ಹಾಗೂ ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2001+1974

**ಅನುಬಂಧ-2**

( Rs. In lakhs)

| YEAR | INVESTMENT SUBSIDY | | INTEREST SUBSIDY | | NA | | ETP SUBSIDY | | VAT | | POWER SUBSIDY | | TOTAL | |
|---|---|---|---|---|---|---|---|---|---|---|---|---|---|---|
| | NO | AMT | NO | AMT | NO | AMT | NO | AMT | NO | AMT | NO | AMT | NO | AMT |
| **2021-22** | 842 | 106.08 | 150 | 1.65 | 2 | 0.09 | - | - | | - | - | - | 994 | 107.82 |
| 2022-23 | 377 | 5944.20 | 231 | 305.16 | 22 | 34.02 | 30 | 933.95 | 1 | 13.03 | 6 | 33.87 | 667 | 7264.23 |
| 2023-24 | 617 | 9223.30 | 1 | 0.54 | - | - | 2 | 49.17 | - | - | - | - | 620 | 9273.01 |
| 2024-25 | 753 | 13352.04 | 104 | 122.11 | 29 | 25.67 | 38 | 1032.97 | - | - | 140 | 474.88 | 1064 | 15007.67 |
| 2025-26 | 398 | 7688.75 | - | - | - | - | 4 | 130.00 | - | - | - | - | 402 | 7818.75 |
| TOTAL | **2987** | **36314.37** | **486** | **429.46** | **53** | **59.78** | **74** | **2146.09** | **1** | **13.03** | **146** | **508.75** | **3747** | **39471.48** |